**ಸಾಕ್ಷಿಯನ್ನು ದಿಃ05.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

2. ನಾನು ಮೂಲತಃ ದೊಡ್ಡ ಕಮರವಳ್ಳಿ ಗ್ರಾಮದವನು.

3. ದೊಡ್ಡ ಕಮರವಳ್ಳಿಗೆ ಹಾಗೂ ದಾವಾ ಸ್ವತ್ತಿಗೆ ಒಂದೂವರೆ ಕಿ.ಮೀ ಅಂತರ ಇದೆ.

4. ವಾದಿಯ ಪತಿ ಎಸ್.ಕೆ.ಹರೀಶಪ್ಪನವರು ಮೂಲತಃ ಶಾನುಭೋಗನಹಳ್ಳಿಯವರು ಎಂದರೆ ಸರಿ. ದೊಡ್ಡ ಕಮರವಳ್ಳಿಗೆ ಹಾಗೂ ಶಾನುಭೋಗನಹಳ್ಳಿಗೆ ಒಂದೂವರೆ ಕಿ.ಮೀ ಅಂತರ ಇದೆ.

5. ನೀವು 2010 ರಲ್ಲಿ ಮೈಸೂರಿನ ಹೆಬ್ಬಾಳದಲ್ಲಿ ವಾಸವಿದ್ದೀರಿ ಎಂದರೆ ಸರಿ.

6. ನಿಪಿ - 1 ಮತ್ತು 13 ಕ್ಕೆ ನೀವು ಸಹಿ ಮಾಡಿರುತ್ತೀರಾ ಎಂದರೆ ಸರಿ.

7. ನೀವು ಯಾವುದೇ ದಾಖಲೆಗೆ ಸಹಿ ಮಾಡುವ ಮುಂಚೆ ಅದರಲ್ಲಿ ಬರೆದ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡುತ್ತೀರಾ ಎಂದರೆ, ಹೌದು.

8. ನೀವು ಇದೇ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಅ.ದಾ.ನಂ.183/2023 ರಂತೆ ದಾವೆ ಹಾಕಿದ್ದೀರಾ ಎಂದರೆ ಸರಿ.

9. ನೀವು ಅದರಲ್ಲಿ ಸಲ್ಲಿಸಿರುವ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರ ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ - 14 ಎಂದು ಗುರುತಿಸಲಾಯಿತು.

10. ಎಸ್.ಕೆ.ಹರೀಶಪ್ಪನವರ ತಂದೆ ಹೆಸರು ಕುಮಾರಸ್ವಾಮಿ ಎಂದರೆ ಸರಿ. ಸದರಿ ಹರೀಶಪ್ಪನವರು ದಿಃ 08.12.2019 ರಂದು ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

11. ಹರೀಶಪ್ಪನವರು ಅವರ ಪತ್ನಿ ಗಿರಿಜಾ ಹಾಗೂ ಅವರ ಮಕ್ಕಳು ಅಮೂಲ್ಯ ಹಾಗೂ ಅಮೋಘ ಎಂದರೆ ಅವರ ಪತ್ನಿಯನ್ನು ನೋಡಿದ್ದೆನೆ ಆದರೆ ಅವರ ಮಕ್ಕಳನ್ನು ನೋಡಿಲ್ಲ.

12. ದಾವಾ ಸ್ವತ್ತು ನಿಮಗೆ 1977-78 ರಲ್ಲಿ ನಿಮಗೆ ಸರ್ಕಾರದಿಂದ ಬಂದ ಆಸ್ತಿ ಎಂದರೆ ಸರಿ. ಮಂಜೂರು ಮಾಡುವಾಗ ಚನಕಲ್ಲುಕಾವಲು ಗ್ರಾಮದ ಸ.ನಂ.30 ಎಂದು ಕೊಟ್ಟಿದ್ದರು ಎಂದರೆ, ಆಗ ಸ.ನಂ.30/106 ಎಂದು ಇತ್ತು, ಈಗ ಸ.ನಂ.30 ಎಂದು ನುಡಿಯುತ್ತಾರೆ.

13. ಈ ದಾವೆ ಹಾಕಿದಾಗ ಸ.ನಂ.30/106 ಎಂದು ಇತ್ತು ಎಂದರೆ ಸರಿ.

14. ನಿಪಿ - 1 ನೀವು ಬರೆದುಕೊಡುವಾಗ ದಾವಾ ಸ.ನಂ.30/106 ಎಂದು ಇತ್ತು ಎಂದರೆ ಸರಿ.

15. ನಿಪಿ - 1 ರಲ್ಲಿ ದಾವಾ ಸ್ವತ್ತನ್ನು ಪತ್ರ ಬರೆದ 6 ತಿಂಗಳ ನಂತರ ಯಾವ ಕಾಲದಲ್ಲಾಗಲಿ ಕರೆದಾಗ ಬಂದು ಉಳಿಕೆ ಹಣ ಪಡೆದು ಶುದ್ಧ ಕ್ರಯಪತ್ರ ಬರೆದುಕೊಡುತ್ತೇನೆ ಎಂದು ಬರೆಸಿದ್ದೀರಾ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 6 ತಿಂಗಳಲ್ಲಿ ಜಮೀನನ್ನು ಪೋಡಿ ಮಾಡಿಸಿ ಆದ ನಂತರ ನೊಂದಣಿ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದರು, ನಾನು ಮಾರುವುದಾದರೆ ನಿಮಗೆ 1 ಎಕರೆ ಕ್ರಯಪತ್ರ ಮಾಡಿಕೊಡುತ್ತೇನೆ ಎಂದು ಹೇಳಿದ್ದೆ ಎಂದು ನುಡಿಯುತ್ತಾರೆ.

16. 6 ತಿಂಗಳ ಕಳೆದ ನಂತರ ನೀವು ದಾವಾ ಸ್ವತ್ತಿನ ಪೈಕಿ 1 ಎಕರೆಯನ್ನು ಸರ್ವೆ ಮಾಡಿಸಿದ್ದೀರಾ ಎಂದರೆ, ಇಲ್ಲ, ಅವರು ಮಾಡಿಸುತ್ತೇನೆ ಎಂದು ಒಪ್ಪಿಕೊಂಡಿದ್ದರು ಆದರೆ ಮಾಡಿಸಿಲ್ಲ. ನೀವೇ ಮಾಡಿಸುತ್ತೇನೆ ಎಂದು ಹೇಳಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

17. ಕರಾರು ಪತ್ರದಂತೆ ನೀವು ವಾದಿಗಳಿಗೆ ದಾಖಲೆಗಳನ್ನು ಒದಗಿಸಿಕೊಡಬೇಕಾಗಿತ್ತು ಎಂದರೆ ಸರಿಯಲ್ಲ.

18. ನಾನು ಮಂಗಳೂರಿನಲ್ಲಿ 12 ವರ್ಷದಿಂದ ನನ್ನ ಮಗಳ ಜೊತೆ ವಾಸವಿದ್ದೇನೆ.

19. ನಿಮಗೆ ದಿಃ 04.03.2020 ರಲ್ಲಿ ಕರಾರು ಪತ್ರದಂತೆ ದಾವಾ ಸ್ವತ್ತಿನ ದಾಖಲೆಗಳನ್ನು ಒದಗಿಸಿ ವಾದಿಗೆ ಕ್ರಯ ಪತ್ರ ಬರೆದುಕೊಡುವಂತೆ ನಿಮಗೆ ಮೈಸೂರಿನ ಹೆಬ್ಬಾಳ ವಿಳಾಸಕ್ಕೆ ನೊಟೀಸು ನೀಡಿದ್ದರು ಎಂದರೆ, ನನಗೆ ನೊಟೀಸು ಬಂದಿಲ್ಲ ಎಂದು ನುಡಿಯುತ್ತಾರೆ. ನೀವು ವಾಸವಿದ್ದರೂ ಅಂಚೆ ಇಲಾಖೆ ಜೊತೆ ಶಾಮಿಲಾಗಿ ವಾಸವಿಲ್ಲ ಎಂದು ಸುಳ್ಳು ಷರಾ ಬರೆಸಿದ್ದೀರಾ ಎಂದರೆ ಸರಿಯಲ್ಲ.

20. ಕರಾರು ಪತ್ರದಂತೆ ಉಳಿಕೆ 75 ಸಾವಿರ ಹಣವನ್ನು ದಿಃ 03.02.2011 ರಂದು 1 ನೇ ವಾದಿಯ ಪತಿಯಿಂದ ನಗದಾಗಿ ಪಡೆದುಕೊಂಡಿದ್ದೀರಾ ಎಂದರೆ ಸರಿಯಲ್ಲ.

21. ಒಟ್ಟು 1 ಲಕ್ಷ 25 ಸಾವಿರ ಪೈಕಿ 70 ಸಾವಿರ ಹಣ ಈಗಾಗಲೇ ನಿಮಗೆ ನೀಡಿದ್ದಾರೆ ಸರಿಯಲ್ಲ, ನನಗೆ 50 ಸಾವಿರ ಮಾತ್ರ ಸಂದಾಯ ಆಗಿದೆ ಎಂದು ನುಡಿಯುತ್ತಾರೆ.

22. ಉಳಿಕೆ 50 ಸಾವಿರ ಹಣವನ್ನು ಈಗಲೂ ನಿಮಗೆ ನೀಡಲು ವಾದಿಗಳು ತಯಾರಿದ್ದಾರೆ ಎಂದರೆ, ಇನ್ನೂ ದುರಸ್ತಿಯಾಗಿಲ್ಲ ಹಾಗಾಗಿ ಬರೆದುಕೊಡಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

23. ದಿಃ 10.02.2011 ರಂದು ನೀವು ಹರೀಶಪ್ಪನವರಿಗೆ ಹಣ ನೀಡಿದ್ದೀರಾ ಎಂದರೆ, ಇಲ್ಲ.

24. ನೀವೇನಾದರೂ ಹರೀಪ್ಪನವರು ಬದುಕಿದ್ದಾಗ ಅಥವಾ ಅವರ ವಾರಸುದಾರರಿಗೆ ಕರಾರು ಪತ್ರವನ್ನು ರದ್ದುಪಡಿಸುವಂತೆ ನೊಟೀಸು ನೀಡಿದ್ದೀರಾ ಎಂದರೆ, ನಾನು ಪತ್ರವನ್ನು ಬರೆದೇಕೊಟ್ಟಿಲ್ಲ ಹಾಗಾಗಿ ನೊಟೀಸು ಕೊಡುವ ಅಗತ್ಯ ಇಲ್ಲ ಎಂದು ನುಡಿಯುತ್ತಾರೆ.

25. ನಿಪಿ - 1 ನ್ನು ರದ್ದುಪಡಿಸುವಂತೆ ನೀವು ದಾವೆ ಹಾಕಿದ್ದೀರಾ ಎಂದರೆ ಇಲ್ಲ.

26. ದಾವಾ ಸ್ವತ್ತಿನ ಕ್ರಯ ಪತ್ರ ಬರೆದುಕೊಡಬೇಕಾಗುತ್ತದೆ ಎಂದು ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

27. ಮಂಜುನಾಥ ಹಾಗೂ ಲಕ್ಷ್ಮೀನಾರಾಯಣ ಯಾರು ಎಂದು ನನಗೆ ಗೊತ್ತಿಲ್ಲ.

28. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಈಗಲೂ ವಾದಿಗಳು ಉಳಿಕೆ ಹಣ ನೀಡಿ ಕ್ರಯಪತ್ರ ಬರೆಸಿಕೊಳ್ಳಲು ತಯಾರಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ